ನೇ.ಗೋ.ಭ., ಕುಕ್ಕೆ ಸುಬ್ರಹ್ಮಣ್ಯ
*ಭಗವಂತರು ಬದಲಾಗುತ್ತಾ ಹೋಗುತ್ತಾರೆ. ಮನುಷ್ಯ ಮಾತ್ರ ಹಾಗೆಯೇ ಇರುತ್ತಾನೆ. ಏಕೆ ರಾಂಜೀ?*




ವಾಷಿಂಗ್ ಮೆಷಿನ್ ನಿಯಮ; ಡಿಟರ್ಜೆಂಟ್ ಬದಲಾದರೂ ಬಟ್ಟೆ ಅದೇ.

ಟಿ.ಆರ್. ವಿಜಯಲಕ್ಷ್ಮಿ, ಬೆಂಗಳೂರು
*ಎಲ್ಲ ವಿವಾಹಿತ ಗಂಡಸರಿಗೂ ಪರಸ್ತ್ರೀ ವ್ಯಾಮೋಹವಿರುವಂತೆ ಎಲ್ಲ ವಿವಾಹಿತ ಸ್ತ್ರೀಯರಿಗೆ ಪರಪುರುಷ ವ್ಯಾಮೋಹ ಏಕಿರುವುದಿಲ್ಲ?*
ಸ್ತ್ರೀಯರು ಅಗುಳು ನೋಡಿ ಬೆಂದಿರುವುದನ್ನು ತಿಳಿಯಬಲ್ಲರು; ಪುರುಷರಿಗೆ ಎಲ್ಲ ಕಾಳುಗಳನ್ನೂ ಪರೀಕ್ಷಿಸುವ ಗೀಳು.

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ದೇವಾಲಯಗಳಲ್ಲಿ ಪೂಜೆ ಸಲ್ಲಿಸುತ್ತಿರುವ ಅರ್ಚಕರಲ್ಲಿ ನಾಸ್ತಿಕರಿದ್ದಾರೆಯೆ?*
ದೇವರ ನೈವೇದ್ಯವನ್ನು ಅಧಿಕಾರಿಗಳಿಗೆ ಅರ್ಪಿಸಿ ಕೃತಕೃತ್ಯರಾಗುವ ಅರ್ಚಕರೆಲ್ಲ ನಾಸ್ತಿಕರೇ.

ಮುಕುಂದ ಹೆರಕಲ್ಲ, ಕಲಬುರ್ಗಿ
*ಗೋಮೂತ್ರ ಪವಿತ್ರ ಎಂಬ ಭಾವನೆ ಇದ್ದರೂ ದೇವರ ಅಭಿಷೇಕಕ್ಕೆ ಅದನ್ನು ಏಕೆ ಬಳಸುವುದಿಲ್ಲ?*



ಬಳಸತೊಡಗಿದರೆ ಅದಕ್ಕೂ ಹಾಲಿನ ಬೆಲೆ ಬಂದು 'ಗಂಜಲ ಡೈರಿ'ಗಳಲ್ಲಿ ಕೊಳ್ಳಬೇಕಾಗುವುದರಿಂದ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
*ಪ್ರಶಸ್ತಿ ಪುರಸ್ಕಾರಗಳು ಪಾಂಡಿತ್ಯದ ನಿಜವಾದ ಅಳತೆಗೋಲೇ ಸಾರ್?*
ಅದು ನೀಡಿದವರ ಗೋಲ್ (gole) ಅನ್ನು ಅವಲಂಬಿಸಿರುತ್ತದೆ.

ಬಿ.ಎನ್. ಸೊಲ್ಲಾಪುರ, ಬೀದರ
*ನಾನು ಮುಂದಿನ ಚುನಾವಣೆಯಲ್ಲಿ ಆರಿಸಿ ಬಂದು ಮುಖ್ಯಮಂತ್ರಿಯಂತೆ ಮೆರೆಯಬೇಕೆಂದಿರುವೆ. ಏನಂತೀರಿ?*
ಅಕಟಕಟಾ! ನಿಮ್ಮ ನಿಜರೂಪ ತೋರಿಸಿಬಿಟ್ಟಿರಿ! ನಿಮ್ಮನ್ನು ಸಭ್ಯರು ಎಂದು ತಪ್ಪು ತಿಳಿದಿದ್ದೆ. ಕ್ಷಮಿಸಿಬಿಡಿ.

ಕೆ.ಎಂ. ವಿಭೂತಿ, ಹರಿಹರ
*ಭ್ರಷ್ಟ ರಾಜಕಾರಣಿಗಳ ಸಾವನ್ನು ತುಂಬಲಾಗದ ನಷ್ಟ ಎಂದು ಹೇಳುವುದು ಸರಿಯೆ?*
ಸರಿಯೆ. ಅವರ ಭ್ರಷ್ಟತೆಯಿಂದಾದ ನಷ್ಟ ಯಾರೇ ತುಂಬ (ಬಹಳ) ಲಾಗ ಹಾಕಿದರೂ ತುಂಬಲಾಗದಲ್ಲ!

ಎಚ್.ಆರ್. ದೇಸಾಯಿ, ರಾಯಚೂರು
*ನಮ್ಮನ್ನು ಹುಟ್ಟಿಸುವ ಬ್ರಹ್ಮ ಮತ್ತು ಕೊಲ್ಲುವ ಯಮನಿಗೆ ಪೂಜೆ ಏಕಿಲ್ಲ?*
ನಮಗೆ ವರ ಕೇಳಲೂ ಅವಕಾಶ ನೀಡದೆ, ಅವನಿಷ್ಟದಂತೆ ಹುಟ್ಟು, ಇವನಿಷ್ಟದಂತೆ ಸಾವು ಕೊಡುವುದರಿಂದ.

ಜಿ. ನಾರಾಯಣಶರ್ಮ, ಬೋಸ್ಸಾನಹಳ್ಳಿ
*ರಸ್ತೆ ಬದಿ ಮದ್ಯ ಮಾರಾಟ ಇಲ್ಲದ ಮೇಲೆ ಬಜ್ಜಿ-ಬೋಂಡ ಅಂಗಡಿಯವರ ಗತಿ?*
ತಲ್ಲಣಿಸದಿರು ಕಂಡ್ಯ ಮದ್ಯಮನವೆ; ಎಲ್ಲರನು ಸಲಹುದು ಕೇಟರಿಂಗೂ....

ಮುರಲೀಧರ ಕುಲಕರ್ಣಿ, ಬೀದರ್
*ಸಂಸದರು, ಶಾಸಕರು ಯಾರಿಗೆ ಬೇಕಾದರೂ ಚಪ್ಪಲಿಯಿಂದ ಹೊಡೆಯಬಹುದೆ?*
ಹೊಡೆಯಬಹುದು. ಅಮಲೇರಿದವರು, ಬುದ್ಧಿಮಾಂದ್ಯರು, ಹುಚ್ಚರು ಹೀಗೆಯೇ ನಡೆದುಕೊಳ್ಳಬೇಕೆಂದು ಹೇಳಲಾಗದು.

ಪಿ.ಎನ್. ಶ್ರೀವತ್ಸ, ಬೆಂಗಳೂರು
*ಈ ಕಲಿಯುಗದಲ್ಲಿಯೂ ಅಶರೀರವಾಣಿ ಕೇಳುವಂತಿದ್ದರೆ...?*
ಸ್ಕಿಝೋಫ್ರೇನಿಯಾ ಎಂದು ಹುಚ್ಚಾಸ್ಪತ್ರೆಗೆ ಅಟ್ಟುತ್ತಾರೆ.

ಕಾಳೀಹುಂಡಿ ಶಿವಕುಮಾರ್, ಮೈಸೂರು
*ಧಾರಾವಾಹಿ ನೋಡುವ ವಿಚಾರದಲ್ಲಿ ನಿಮ್ಮ ಮನೆಯಲ್ಲೂ ದಿನವೂ ಜಗಳ ನಡೆಯುತ್ತದಂತೆ?*
ನಿಜ. ದಿನಕ್ಕೆ ಆರು ಕರ್ಚೀಫ್ ಬೇಕೆಂದು ಮನೆಯಾಕೆ; ಕರ್ಚೀಫ್ ಅಲ್ಲ, ಟವಲ್ ಎಂದು ನಾನು.

## ಬಹುಮಾನಿತ ಪ್ರಶ್ನೆ

ವೀರೇಂದ್ರ ಎಮ್. ಮೇಗೂರ್, ಧಾರವಾಡ
*ಕಾನೂನೆಂಬ ಕತ್ತೆ ಬಡವರನ್ನೇ ಏಕೆ ಒದೆಯುತ್ತದೆ?*
ಸಿರಿವಂತರು ಆ ಕತ್ತೆಗಿಂತ ಮುಂದೆ ನಿಲ್ಲುತ್ತಾರೆ; ಬಡವರೇ ಹಿಂಬಾಲಿಸಲೆಂದು ಅದರ ಹಿಂದೆ ನಿಲ್ಲುವುದು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಮುಖ್ಯವಾದುದು ಹೆಂಡತಿಯೋ, ಹಣವೋ?*
ಹೆಂಡತಿಯೇ; ಖರ್ಚಿಗೆ ದಾರಿಯಿಲ್ಲದ ಹಣ ಕಸಕ್ಕೆ ಸಮಾನ.

ಜಿ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಸಂಸ್ಕಾರ ಮುಖ್ಯವೋ, ಸಂಬಂಧ ಮುಖ್ಯವೋ?*
ಇರುವವರೆಗೆ ಸಂಬಂಧ, ಅಂತ್ಯವಾದಾಗ ಸಂಸ್ಕಾರ.

ರಮೇಶ ಜಿ. ಬೊಂಗಾಳೆ, ಬೈಲಹೊಂಗಲ
*ವೀಣೆಯಿಂದ ನಾದ ಹೊರಹೊಮ್ಮುತ್ತದೆ. ಹೆಣ್ಣಿನಿಂದ?*



ಸರಿಯಿದ್ದಾಗ ಸ್ವಾದ; ಹದಗೆಟ್ಟಾಗ ವಾದ.

ಅಮೃತೇಶ್ವರ ತಂಡರ, ಅಣ್ಣಿಗೇರಿ
*ಭಕ್ತಿಮಾರ್ಗ ಮತ್ತು ಜ್ಞಾನಮಾರ್ಗದಲ್ಲಿ ಯಾವುದು ಶ್ರೇಷ್ಠ?*
ಎರಡೂ ಶ್ರೇಷ್ಠವೇ. ಭಕ್ತಿಮಾರ್ಗ ವಾಹನ; ಜ್ಞಾನಮಾರ್ಗ ಅದಕ್ಕೆ ಅಗತ್ಯವಾದ ಇಂಧನ.

ಬಿ. ಚಂದ್ರೇಗೌಡ, ಬೆಂಗಳೂರು
*ಗುಲಾಬಿಯು ಮುಳ್ಳಿನ ಜೊತೆಗೇ ಇರುವುದು ಏನನ್ನು ಸೂಚಿಸುತ್ತದೆ?*
ಹೂ ತಲೆಯಂತೆ ಮೆದು; ಹೆಲ್ಮೆಟ್ ಮುಳ್ಳಿನಂತೆ ರಕ್ಷಕ; ಹೆಲ್ಮೆಟ್ ಧರಿಸಿ ಎಂಬ ಸಂದೇಶವನ್ನು!

ಮಹಾವೀರ ಕಾಸರ, ಶಿವಮೊಗ್ಗ
*ಕೆರೆಗಳು ಕಾಣೆಯಾದಾಗ ಏಕೆ ದೂರು ದಾಖಲಾಗುವುದಿಲ್ಲ?*
ಕೆರೆಯ ದೂರನು ಮರೆಗೆ ತಳ್ಳಿ 'ವರವ' ಪಡೆಯುವ ದಾರಿ ಕಾಣಲು!

■ ರಾಮ್